(ಶ್ರೀ ಎಂ. ಎಸ್. ಕೃಷ್ಣನ್)

ನವರು ನನ್ನ ಸ್ನೇಹಿತರು ಹೇಳಿದಂತೆ ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ, ಅವರು ಅಪಾಲಜಿ ಕೇಳ ಬೇಕೆಂದು ಹೇಳುತ್ತಿದ್ದರು. 'ರಿಗ್ರೆಟ್' ಎಂದರೇನು, 'ಅಪಾಲಜಿ' ಎಂದರೇನು ? 'ಅಪಾಲಜಿ' ಅಂದರೆ 'ಎಕ್ಸ್‌ಪ್ರೆಷನ್ ಆಫ್ ರಿಗ್ರೆಟ್' ಎಂದು ಡಿಕ್ಷನರಿಯಲ್ಲಿ ಹಾಕಿದ್ದಾರೆ. The word ''apology'' means 'expression of regret.' Expression of regret has been made and a person seasoned in Parliamentary practice should have simply accepted it and be done with it and see that the work is done.

ನನಗೇಕೆ ತಮ್ಮ ಬಗ್ಗೆ ಒಂದು ಅನುಮಾನ ಬರುತ್ತಿದೆ ಎಂದರೆ ತಾವೇನು ಸಭೆಯ ಮುಂದೆ ರೈತರ ವಿಚಾರದಲ್ಲಿ ಒಂದು ತಿದ್ದುಪಡಿ ಬಿಲ್ಲನ್ನು ತರಬೇಕೆಂದ್ದೀರೋ ಅದನ್ನು ಮನಸ್ಸಿಲ್ಲದೆ ತಂದಿರುವುದರಿಂದ, ಅದನ್ನು ಪಾಸ್ ಮಾಡುವುದಕ್ಕೆ ಸಾಕಷ್ಟು ಕಾಲಾವಕಾಶ ಸಿಕ್ಕಲಿಲ್ಲ ಅನ್ನತಕ್ಕ ನೆಪದಲ್ಲಿ, ಅದನ್ನು ಹಿಂದಕ್ಕೆ ಹಾಕೋಣ ಅನ್ನತಕ್ಕ ಉದ್ದೇಶದಿಂದಲೋ ಅಥವಾ ಆ ರೈತರಿಗೆ ಆಗತಕ್ಕ ತೊಂದರೆಗಳು ಇನ್ನೂ ಸ್ವಲ್ಪ ಕಾಲ ಹಾಗೇ ಉಳಿದಿರಲಿ ಎಂಬ ಭಾವನೆಯಿಂದಲೋ ಆ ಬಿಲ್ಲಿಗೆ ಬೇಕಾಗುವ ವೇಳೆಯನ್ನೆಲ್ಲ ಈ ಸಂದರ್ಭಕ್ಕೇ ಬಳಸೋಣ ಎಂದು ಅನ್ನುವ ಹಾಗೆ ಇರುವಂತೆ ನನಗೆ ಭಾನವಾಗುತ್ತಿದೆ. ದಯವಿಟ್ಟು ಹಾಗೆ ಮಾಡಬೇಡಿ. you will be creating a very bad precedent in a democracy. You are trying to revoke a thing which has been done. I do not want you to do that.

Ruling

ಅಧ್ಯಕ್ಷರು.—ಈ ಅನ್ ಹ್ಯಾಪಿ ಇವೆಂಟ್ ನಡೆದಾಗ ನಾನು ಈ ಸ್ಥಾನದಲ್ಲಿರಲಿಲ್ಲ. ಆ ವೇಳೆಯಲ್ಲಿ ನಾನು ನನ್ನ ಛೇಂಬರಿನೊಳಗಡೆ ಕುಳಿತು ಇಲ್ಲಿ ನಡೆಯುತ್ತಿದುದನ್ನೆಲ್ಲಾ ಕೇಳಿದೆ. ಆಗ ನಾನು ಈ ಸ್ಥಾನಕ್ಕೆ ಕೂಡಲೇ ಬರಬೇಕಾಯಿತ್ತು. ನಾನು ಇಲ್ಲಿಗೆ ಬಂದ ಮೇಲೆ ಮತ್ತೆ ಹೊಸದಾಗಿ ಎಲ್ಲವೂ ಪುರುವಾಗುತ್ತದೆಯಲ್ಲಾ—ಆದುದರಿಂದ ಆ ದಿನದ ಪ್ರಸಂಗ ಅಷ್ಟಕ್ಕೇ ಮುಗಿಯಲಿ ಎಂಬ ಒಂದು ಸದುದ್ದೇಶದಿಂದ ನಾನು ಆ ವೇಳೆಯಲ್ಲಿ ಈ ಸ್ಥಾನಕ್ಕೆ ಬಂದು ಕುಳಿತುಕೊಳ್ಳಲಿಲ್ಲ. ಒಂದು ವೇಳೆ ಬಂದಿದ್ದರೆ ಚೆನ್ನಾಗಿರುತ್ತಿತ್ತೋ ಏನೋ.

ಆದರೆ ಆ ದಿವಸ ಈ ಮಾನ್ಯ ಸಭೆಯಲ್ಲಿ ಏನು ನಡೆಯಿತೋ ಅದು ನಿಜವಾಗಿಯೂ ಇಂಥ ಯಾವ ಶಾಸನ ಸಭೆಗೂ ಮರ್ಯಾದೆ, ಘನತೆ, ಗೌರವಗಳನ್ನು ತರುವಂಥದ್ದಲ್ಲ. ಮನುಷ್ಯನ ನಾಲಿಗೆಗೆ ಮೂಳೆ ಇಲ್ಲವೆಂದು ಮನಸ್ಸಿಗೆ ಬಂದಹಾಗೆ ಮಾತುಗಳನ್ನು, ಆಗಿನ ಸಂದರ್ಭಕ್ಕೆ ಸಮಂಜಸವಾಗಿರಲಿ—ಇಲ್ಲದಿರಲಿ ಆಡುವುದು ಸರಿಯಾದ್ದಲ್ಲ. ಇಂಥ ಸಭೆಗಳಲ್ಲಿ ಮಾತನಾಡುವಾಗ ಸದಸ್ಯರು ಆಡತಕ್ಕ ಮಾತುಗಳಿಗೆಲ್ಲಾ ಸಾಕಷ್ಟು ಆಧಾರಗಳು ಇವೆಯೇ ಎಂಬುದನ್ನು ದೃಢಪಡಿಸಿಕೊಂಡು ಮಾತನಾಡಬೇಕು. ನಾವೆಲ್ಲರೂ ಇಲ್ಲಿ ಸೇರಿರುವುದು ದೇಶಕ್ಕೆ ಸಂಬಂಧಪಟ್ಟ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ. ಆದಕ್ಕೆ ಎಷ್ಟು ಅಗತ್ಯವೋ ಅಷ್ಟನ್ನು ಮಾತ್ರ ಇಲ್ಲಿ ಮಾತನಾಡಬೇಕೇ ವಿನಹ ಅದನ್ನು ಬಿಟ್ಟು ಈ ಸಭೆಗೆ ಅನೇಕ ವೀಕ್ಷಕರು ಬಂದಿದ್ದಾರೆ, ಪ್ರೆಸ್ಸಿನವರಿದ್ದಾರೆ—ಎಲ್ಲೆಲ್ಲೂ ನನ್ನ ಹೆಸರು ಪ್ರಚಾರಕ್ಕೆ ಬರುತ್ತದೆ ಎಂಬ ಭಾವನೆಯಿಂದ ಹಾಗೆಲ್ಲ ಮಾತನಾಡಬಾರದು. ಹಾಗೆ ಮಾತನಾಡುವುದು ಯಾರಿಗೂ ಸೊಗಸುವುದಿಲ್ಲ, ಮತ್ತು ಈ ಸಭೆಗೂ ಭೂಷಣವಲ್ಲ, ನಮ್ಮ ಸಭೆಯ ಕೆಲವು ಹಿರಿಯ ಸಚಿವರುಗಳಿಗೂ ಮತ್ತು ಹಿರಿಯ ಸದಸ್ಯರುಗಳಿಗೂ ಅವರ ಮಾತುಗಳಿಂದ ಮನಸ್ಸಿಗೆ ಬಹಳ ನೋವಾಗಿರುವಂತೆ ಗೊತ್ತಾಗಿದೆ. ಇದೇ ವಿಚಾರದಲ್ಲಿ ವಿರೋಧ ಪಕ್ಷದ ನಾಯಕರೂ ಮತ್ತು ಶ್ರೀ ಎಂ. ಎಸ್. ಕೃಷ್ಣನ್ ಅವರೂ ತಮ್ಮ ವ್ಯಥೆಯನ್ನು ವ್ಯಕ್ತಪಡಿಸಿದ್ದಾರೆ. ಶ್ರೀ ಪಾಟಾಳ್ ನಾಗರಾಜ್ ಅವರೂ ಕೂಡ ತಮ್ಮ ರಿಗ್ರೆಟ್ಟನ್ನು ಎಕ್ಸ್‌ಪ್ರೆಸ್ ಮಾಡಿದ್ದಾರೆ. ಹರ್ತ್ ಮಿನಿಸ್ಟರಿಗೂ ಮತ್ತು ಪಿ.ಡಬ್ಲ್ಯೂ.ಡಿ. ಮಿನಿಸ್ಟರಿಗೂ ಬಹಳ ಕಳಕಳಿಯಿಂದ ತಮ್ಮ ಮನನೊಂದು ಆವರು ಅವರ ಎಕ್ಸ್‌ಪ್ರೆಷನ್‌ಗಳನ್ನು ವಾಪಸ್ ತೆಗೆದುಕೊಂಡಿರುವುದಾಗಿ ಹೇಳಿದ್ದಾರೆ. ಇನ್ನು ಮುಂದೆ ಅವರು ಯಾವ ಇಂಥ ಶಬ್ದಗಳನ್ನೂ ಆಧಾರವಿಲ್ಲದೆ ಸಭೆಗಳಲ್ಲಿ ಬಳಸುವಾರದೆಂದು ಅವರಿಗೆ ಸೂಚನೆ ಮಾಡುತ್ತೇನೆ.

ಇಲ್ಲಿಯ ವಾತಾವರಣ ಒಂದು ಶಾಂತ ರೀತಿಯಿಂದ ಎಲ್ಲರಿಗೂ ಅನುಕೂಲವಾಗಲು ಮತ್ತು ಈ ಸಭೆಯ ಕೆಲಸ ಕಾರ್ಯಗಳು ಸುಗಮವಾಗಿ ನಡೆಯಲು ಅನುಕೂಲವಾಗತಕ್ಕಂಥ ರೂಲಿಂಗನ್ನು ಕೊಡಬೇಕೆಂದು ಈ ಸಭೆಯ ಸರ್ವ ಪಕ್ಷಗಳವರೂ ಕೇಳಿಕೊಂಡಿದ್ದಂತೆ ಎಲ್ಲ ಅಂಶಗಳನ್ನೂ ಗಮನಕ್ಕೆ ತೆಗೆದುಕೊಂಡು ಈ ಸಭೆಯ ಕೆಲಸ ಕಾರ್ಯಗಳಲ್ಲಿ ಎಲ್ಲರೂ ಸಹಕರಿಸಿ ನಡೆಯುವಂತಾಗಲೆಂದು ನಾನು ಆ ಹಿಂದಿನ ವಿಚಾರಗಳನ್ನೆಲ್ಲಾ ಕ್ಲೋಸ್ ಮಾಡಿದ್ದೇನೆ. I close this matter.

ಶ್ರೀ ಎಚ್. ಸಿದ್ದವೀರಪ್ಪ.—ತಮ್ಮ ರೂಲಿಂಗಿಗೆ ನಾವು ತಲೆಬಾಗಿ ನಡೆಯುತ್ತೇವೆ. ತಮಗೆ ನಾವು ಆಭಾರಿಯಾಗಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್.—ತಮ್ಮ ರೂಲಿಂಗಿಗೆ ನಾನೂ ಆಭಾರಿಯಾಗಿದ್ದೇವೆ. ಇದರಿಂದ ನಾವೆಲ್ಲರೂ ಒಂದು ಪಾಠವನ್ನು ಕಲಿತಂತಾಗಿದೆ.

ಶ್ರೀ ಎಚ್. ಡಿ. ದೇವೆಗೌಡ.—ಶ್ರೀಮಾನ್ ನಾಗಣ್ಣನವರೂ ಇದಕ್ಕೆ ಸಂಬಂಧಪಟ್ಟ ಹಾಗೆ ಒಂದು ಪ್ರಿವಿಲೇಜ್ ಮೋಷನ್ ಕಳುಹಿಸಿರುವಂತಿದೆ. ಅದನ್ನೂ ಕೂಡ ಅವರು ದಯವಿಟ್ಟು ಹಿಂದಕ್ಕೆ ತೆಗೆದುಕೊಳ್ಳುವುದು ಉತ್ತಮ ಎಂದು ಹೇಳುತ್ತೇನೆ. I request him to withdraw it in view of the need to create a healthy atmosphere. It is not necessary to press.

Sri K. M. NAGANNA (Chickpet).—I do not press my motion. ಇಲ್ಲಿ ಹೇಗೆ ಮಾತನಾಡಬೇಕು ಎಂಬುದನ್ನು ಈ ಸಭೆಗೆ ಬಂದಿರತಕ್ಕ ಮಾನ್ಯ ಸದಸ್ಯರಿಗೆಲ್ಲಾ ತಿಳಿಯಪಡಿಸಲು ಮಾನ್ಯ ಅಧ್ಯಕ್ಷರು ಒಂದು ಪಾಠಶಾಲೆಯನ್ನು ಇಡುವುದು ಒಳ್ಳೆಯದು ಎಂದು ನನ್ನ ಭಾವನೆ. ಇದಕ್ಕಾಗಿ ಬಜೆಟ್ಟಿನಲ್ಲಿ ಒಂದು ಪ್ರಾವಿಜನ್ ಮಾಡಬೇಕೆಂದು ಹೇಳುತ್ತೇನೆ. ಆ ದಿವಸ ಶ್ರೀ ಮಲ್ಲಿಕಾರ್ಜುನ ಸ್ವಾಮಿಯವರು ಸಭೆಯಲ್ಲಿ ತಾವು ಒಬ್ಬ ಮಂತ್ರಿಗಳೆಂಬುದನ್ನೂ ಕೂಡ ಮರೆತು ತೋಳನ್ನು ಮುದುರುವುದಕ್ಕೆ ಪ್ರಾರಂಭಮಾಡಿದ್ದರು. ನಾನು ಹುಡುಗನಾಗಿದ್ದಾಗ ಹಾಗೆ ತೋಳನ್ನು ಮುದುರುವುದು ಗೊತ್ತಿತ್ತು.

ಶ್ರೀ ಎಚ್. ಸಿದ್ದವೀರಪ್ಪ.—ಹಾಗೆ ಮಾತನಾಡುವುದು ಕೆಲವರ ಸ್ವಭಾವ.

ಶ್ರೀ ಎಂ. ಎಸ್. ಕೃಷ್ಣನ್.—ಹೌದು ಹಾಗೇ ಶ್ರೀ ವಾಟಾಳ್ ನಾಗರಾಜ್ ಅವರಿಗೆ ಕೂಡ ಹಾಗೆ ಮಾತನಾಡುವುದು ಅವರ ಒಂದು ಸ್ವಭಾವ,

ಶ್ರೀ ಕೆ. ಎಂ. ನಾಗಣ್ಣ.—ನಾನು ಹೇಳಿದ್ದು ಸದಸ್ಯರಿಗೆ ಎಂದು. ಆದರೆ ಮಂತ್ರಿಗಳು ಕೂಡ ಮೊದಲು ಸದಸ್ಯರು, ಆ ನಂತರ ಅವರು ಮಂತ್ರಿಗಳು. ಆದ್ದರಿಂದ ಹೇಳಿದ್ದಕ್ಕೆ ಇವರು ಕೋಪ ಮಾಡಿಕೊಳ್ಳುವ ಹಾಗೂ ಇಲ್ಲ—ಅತ್ತ ಅವರು ಸಂತೋಷಪಟ್ಟುಕೊಳ್ಳುವ ಹಾಗೂ ಇಲ್ಲ.

ಶ್ರೀ ಎಸ್. ಬಂಗಾರಪ್ಪ.—ತಾವು ಆ ಪಾಠಶಾಲೆಯನ್ನು ಮಾಡಿದರೆ ಅದಕ್ಕೆ ಪ್ರಿನ್ಸಿಪಾಲರು ಶ್ರೀಮಾನ್ ಸಿದ್ದವೀರಪ್ಪನವರು, ವೈಸ್ ಪ್ರಿನ್ಸಿಪಾಲರು ಶ್ರೀ ಎಚ್. ಎಂ. ಚೆನ್ನಬಸಪ್ಪನವರು ಮತ್ತು ಅದಕ್ಕೆ ಫಿಜಿಕಲ್ ಕಲ್ಚರ್ ಇನ್‌ಸ್ಟ್ರಕ್ಟರ್ ಶ್ರೀ ಮಲ್ಲಿಕಾರ್ಜುನ ಸ್ವಾಮಿಯವರನ್ನು ನೇಮಕ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಒಬ್ಬ ಮಾನ್ಯ ಸದಸ್ಯರು.—ಹಿರಿಯರಿಗೇ ಒಂದು ಶಾಲೆ—ಕಿರಿಯರಿಗೇ ಒಂದು ಶಾಲೆ ತೆರೆಯಬೇಕು.

Motion of thanks to the Governor's Address

(Debate Contd.)

ಶ್ರೀ ಬಿ. ಎ. ಕಕ್ಕಿಲಾಯ (ಬಂಟ್ವಾಳ್).—ಮಾನ್ಯ ಅಧ್ಯಕ್ಷಣಿಯರೇ ನಾವೀಗ ರಾಜ್ಯಪಾಲರ ಭಾಷಣದ ಬಗ್ಗೆ ಚರ್ಚೆ ನಡೆಸುತ್ತಿದ್ದೇವೆ. ಆದರೆ ಇದೇ ಸದನದಲ್ಲಿ ಅನೇಕ ಬಾರಿ ಚರ್ಚೆಯಾಗಿರತಕ್ಕ ಒಂದು ವಿಷಯ ಅಂದರೆ ಈ ರಾಜ್ಯಕ್ಕೆ ಕರ್ಣಾಟಕ ಎಂದು ಹೆಸರನ್ನು ಇಡತಕ್ಕ ವಿಷಯ. ಅನೇಕ ಸಾರಿ ಚರ್ಚೆ ನಡೆದಿದ್ದರೂ ರಾಜ್ಯಪಾಲರು ಅದರ ಬಗ್ಗೆ ಒಂದು ಮಾತನ್ನು ಅವರ ಭಾಷಣದಲ್ಲಿ ಹೇಳಿಲ್ಲ. ಇದು ಬರೇ ಒಂದು ಹೆಸರಿನ ಪ್ರಶ್ನೆ ಅಲ್ಲ. ಇದರ ಬಗ್ಗೆ ಸರ್ಕಾರ ಏನು ಒಂದು ತೀರ್ಮಾನ ಮಾಡಿದ್ದಾರೆ? ಹಿಂದೆ ಇದ್ದ ಸರ್ಕಾರ ಇದರ ಬಗ್ಗೆ ಒಂದು ವಿರೋಧವಾದ ತೀರ್ಮಾನ